<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 274/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಸಿದ್ದಪ್ಪ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಪೂತಭೋವಿ | 4 | 2 |
| ವಯಸ್ಸು | 63 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **09.02.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಗಿರಿಗೌಡನದೊಡ್ಡಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ನೋಟೀಸ್ ನಲ್ಲಿ ನನ್ನ ಸಹಿ ಇದ್ದು ಅದನ್ನು ಈಗಾಗಲೇ ನಿಶಾನೆ.ಪಿ. 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಶಾನೆ.ಪಿ. 2 ರ ಮಹಜರ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಬಿ) ಎಂದು ಗುರುತಿಸಲಾಯಿತು. ಸುಮಾರು 1 ವರ್ಷದ ಹಿಂದೆ ನಾನು ನಮ್ಮ ಮನೆಯ ಬಳಿ ಇದ್ದಾಗ ಪೊಲೀಸರು ಬಂದು ನನ್ನ ಸಹಿ ಪಡೆದುಕೊಂಡರು. ನಿಶಾನೆ.ಪಿ. 2 ರ ಒಕ್ಕಣೆ ಗೊತ್ತಿಲ್ಲ. ಪೊಲೀಸರು ಬೀಟ್ ಗೆ ಬಂದಾಗ ಸಹಿ ಪಡೆದರು, ಕಾರಣ ಗೊತ್ತಿಲ್ಲ. ನನ್ನ ಜೊತೆಗೆ ಚಾಸಾ. 3 / ಸುದರ್ಶನ್ ರವರು ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ನನಗೆ ಗಲಾಟೆಯ ಬಗ್ಗೆ ಏನು ಗೊತ್ತಿಲ್ಲ. ಆರೋಪಿತರು ನಮ್ಮ ಊರಿನವರು ಹಾಗೂ ಪರಿಚಿತರು. ಚಾಸಾ. 1 ಗೊತ್ತು.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಪೊಲೀಸರು ಗಲಾಟೆ ವಿಚಾರದಲ್ಲಿ ಸ್ಥಳಕ್ಕೆ ಬಂದು ನೋಟೀಸ್ ಕೊಟ್ಟು ನನ್ನ ಸಮಕ್ಷಮ ಮಹಜರ್ ಮಾಡಿ ಎರಡು ಪ್ಲಾಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಕಲ್ಲು, ರಕ್ತ ಕಲೆಯಾದ ಶರ್ಟ ಅನ್ನು ವಶಕ್ಕೆ ಪಡೆದರು ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ :

ಆರೋಪಿತರು ಒಂದೇ ಊರಿನವರು ಆಗಿದ್ದರಿಂದ ನನಗೆ ಪರಿಚಯ ಎಂದರೆ ಸರಿ. ನನಗೆ ಅವರ ಜೊತೆಗೆ ಯಾವುದೇ ವಿಶ್ವಾಸ ಇರುವುದಿಲ್ಲ ಎಂದರೆ ಸರಿ. ಪೊಲೀಸರು ಬೀಟ್ ಗೆ ಬಂದ ಸಮಯದಲ್ಲಿ ಇದೇ ರೀತಿ ಸಹಿ ಮಾಡಿದ್ದು ಆ ಕಾರಣಕ್ಕೆ ಹೋಗಿದ್ದೆ. ಯಾವ ವಿಚಾರದಲ್ಲಿ ಪೋಲೀಸರು ಫೋಟೋಗಳನ್ನು ತೆಗೆದರು ಎಂದು ಗೊತ್ತಿಲ್ಲ. ಸದರಿ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿ. ಫೋಟೋ ತೆಗೆದ ಜಾಗದಲ್ಲಿ ಪೋಲೀಸರು ಏನನ್ನು ಬರೆದುಕೊಂಡಿಲ್ಲ ಎಂದರೆ ಸರಿ. ಪೊಲೀಸರು ಫೋಟೋದಲ್ಲಿ ಕಾಣುವ ಮು.ಮಾಗಳನ್ನು ಅವರೇ ತಂದಿದ್ದರು. ಪೋಲೀಸರು ಯಾವ ವಿಚಾರದಲ್ಲಿ ಮಹಜರ್ ಮಾಡಿದ್ದರು ಎಂದು ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ. ಪೊಲೀಸರು ನನಗೆ ನೋಟೀಸ್ ನೀಡಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಏನು ಇದೆ ಎಂದು ತಿಳಿದುಕೊಂಡಿಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.